ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ

**ಸಿ.ಸಿ. ನಂ. 567/2019**

ಸಾಕ್ಷಿಗೆ ದಿನಾಂಕ **11.10.2022** ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಘು | ಪಿ.ಡಬ್ಲ್ಯೂ-8 |
| ತಂದೆಯ/ಗಂಡನ ಹೆಸರು | : | ವೆಂಕಟೇಶ್ | ಸಿ.ಡಬ್ಲ್ಯೂ-27 |
| ವಯಸ್ಸು | : | 48 | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಹಂಪಾಪುರ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನನಗೆ ಆರೋಪಿ ಸುಮಾರು 8-9 ವರ್ಷದಿಂದ ಪರಿಚಯವಿರುತ್ತಾರೆ. ಆರೋಪಿ ಅಗನ್ ಲ್ಯಾಬ್‌ನ್ನು ಹಂಪಾಪುರದಲ್ಲಿ ನಡೆಸುತ್ತಿದ್ದರು. ನಾನು ಅವರ ಕ್ಲಿನಿಕ್‌ಗೆ ಎಂದಿಗೂ ಹೋಗಿರುವುದಿಲ್ಲ. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿರುವುದಿಲ್ಲ. ಪೋಲಿಸರು ಸಮನ್ಸನ್ನು ನನಗೆ ಜಾರಿ ಮಾಡಿದಾಗ ಆರೋಪಿ ಒಂದು ಮಗುವಿಗೆ ಚಿಕಿತ್ಸೆ ನೀಡಿದ್ದು, ಆತ ಮೃತಪಟ್ಟಿರುತ್ತಾನೆ, ಅದರ ಸಂಬಂಧ ನೀವು ಸಾಕ್ಷಿ ನುಡಿಯಲು ತಿಳಿಸಿರುತ್ತಾರೆ. ಆರೋಪಿ ಯಾರಿಗೆ ಚಿಕಿತ್ಸೆ ನೀಡಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ, ಸದರಿ ಮಗುವನ್ನು ಸಹ ನಾನು ನೋಡಿರುವುದಿಲ್ಲ. ಈ ಕೇಸಿನ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಎಪಿಪಿಯವರು ಸಾಕ್ಷಿಯನ್ನು ಭಾಗಾಂಶ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲುಃಎಪಿಪಿ ರವರಿಂದಃ

ನಾನು ಮೇಲ್ಕಂಡ ವಿಳಾಸದಲ್ಲಿ ಸಂಸಾರದೊಂದಿಗೆ ವಾಸವಾಗಿದ್ದು, ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕನಾಗಿ ಕೆಲಸ ಮಾಡಿಕೊಂಡಿರುತ್ತೇನೆ. ನಮ್ಮ ಊರಿನ ಡಾಕ್ಟರ್ ಪ್ರದೀಪ್ ಬಿನ್ ರಾಜಗೋಪಾಲ್ ಪಿಳ್ಳೈ ರವರು ನನಗೆ ಗೊತ್ತು. ನಮ್ಮ ಮನೆಯ ಎದುರುಗಡೆ ಇವರ ಮನೆ ಇರುತ್ತದೆ. ಇವರು ತಮ್ಮ ಮನೆಯ ಮುಂದೆ ಒಂದು ರೂಂನಲ್ಲಿ ..........................................................................................................

.............................................................................................................

ತಕ್ಷಣೆ ನಾಗರಾಜುವಿನ ಸಾವಿನ ಬಗ್ಗೆ ನಾಗರಾಜು ತಂದೆ ಮತ್ತು ಇವರ ಕಡೆಯವರು ಪೋಲಿಸ್ ಕಂಪ್ಲೇಂಟ್ ಕೊಡದಂತೆ ವಿಳಂಬ ಮಾಡಿಸಿ ನಾಗರಾಜುವಿನ ಸಾವಿನ ಸಾಕ್ಷ್ಯಗಳು ನಾಶವಾಗುವಂತೆ ಮಾಡಿರುತ್ತಾನೆ. ನಾಗರಾಜುವಿನ ಸಾವಿಗೆ ಕಾರಣನಾಗಿರುವ ನಮ್ಮ ಊರಿನ ಆರ್.ಪ್ರದೀಪ ನನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಈಗ ಓದಿ ಕೇಳಿಸಿಕೊಂಡ ನಿಪಿ17 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಏನು ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ